# ಸೆಲೆಬ್ರಿಟಿ

ಹನಿ



## ಅಶಾಂತಿ ಭೂಷಣ್?

ಲೋಕಪಾಲ ಮಸೂದೆಯನ್ನು ರೂಪಿಸುವ ಸಮಿತಿಯಲ್ಲಿ ಶಾಂತಿ ಭೂಷಣ್ ಮತ್ತು ಅವರ ಮಗ ಪ್ರಶಾಂತ ಭೂಷಣ್ ಇರುವುದು ಕೆಲವು ರಾಜಕಾರಣಿಗಳಿಗೆ ಪಥ್ಯವಾದಂತಿಲ್ಲ. ಅದಕ್ಕೆಂದೇ ಈ ಇಬ್ಬರ ವಿರುದ್ಧ ಹತ್ತಾರು ಆಪಾದನೆಗಳು ಹರಿದಾಡುತ್ತಿವೆ. ಹಿಂದೆ ಪ್ರಕರಣವೊಂದರಲ್ಲಿ ಶಾಂತಿಭೂಷಣ್ ನ್ಯಾಯಾಧೀಶರ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದು, ಅದರ ಧ್ವನಿಮುದ್ರಣ ಇದೆಯೆನ್ನಲಾದ ಸಿ.ಡಿ ಹೊರಬಿದ್ದಿದೆ. ಇದು ತಿರುಚಿದ ಸಿ.ಡಿ ಅಲ್ಲವೆಂದು ಪ್ರಯೋಗಾಲಯವೂ ವರದಿ ನೀಡಿದೆ.

ಶಾಂತಿಭೂಷಣ್ (ಬರ್ತ್‌ಡೇ 11-11-1925) ಪ್ರಖರ ಬುದ್ಧಿಮತ್ತೆಯ ವಕೀಲ. ಆದಾಯ ತೆರಿಗೆಗೆ 3600 ರೂಪಾಯಿ ವಾರ್ಷಿಕ ಮಿತಿ ಇದ್ದಾಗಲೇ ಅವರು ವರ್ಷಕ್ಕೆ 6600 ರೂಪಾಯಿ ಆದಾಯ ಗಳಿಸಿ ತೆರಿಗೆ ಕಟ್ಟುತ್ತಿದ್ದವರು. ಈಗ ಅವರ ಕೋಟ್ಯಂತರ ರೂಪಾಯಿ ಆಸ್ತಿಪಾಸ್ತಿಯ ಬಗ್ಗೆ ನಾನಾ ಸುದ್ದಿಗಳು ಹರಡುತ್ತಿವೆ. 1977ರಿಂದ 79ರವರೆಗೆ ಪ್ರಧಾನಿ ಮೊರಾರ್ಜಿ ದೇಸಾಯಿ ಸಂಪುಟದಲ್ಲಿ ಕಾನೂನು ಸಚಿವರಾಗಿದ್ದ ಶಾಂತಿ ಭೂಷಣ್, ಕಾಂಗ್ರೆಸ್-ಓ ಮತ್ತು ಜನತಾಪಕ್ಷದ ಮೂಲದವರು. ಲೋಕಪಾಲ ಮಸೂದೆಯನ್ನು ಅವರು 1977ರಲ್ಲೇ ಕಾನೂನು ಸಚಿವರಾಗಿ ಮಂಡಿಸಿದ್ದರು.

ವಕೀಲರಾಗಿ ಶಾಂತಿಭೂಷಣ್ ರಾಜಕೀಯ ಮಹತ್ವ ಪಡೆದುಕೊಂಡದ್ದು ಇಂದಿರಾ ಕಾಲದಲ್ಲೇ. ಪ್ರಧಾನಿ ಇಂದಿರಾರ ಚುನಾವಣಾ ಫಲಿತಾಂಶದ ವಿರುದ್ಧ ರಾಜ್‌ನಾರಾಯಣ್ ಸಲ್ಲಿಸಿದ್ದ ಅರ್ಜಿಯ ಪರ ವಾದ ಮಾಡಿ ಗೆದ್ದವರು ಶಾಂತಿಭೂಷಣ್. ಇಂದಿರಾ ಆಯ್ಕೆ ಅನೂರ್ಜಿತ ಎಂದು ಕೋರ್ಟ್ ಘೋಷಿಸಿದ್ದು ಬಳಿಕ ದೇಶದ ಮೇಲೆ ತುರ್ತುಪರಿಸ್ಥಿತಿಯೂ ಹೇರಲ್ಪಟ್ಟಿತು. ಆ ಬಳಿಕ ಜನತಾಪಕ್ಷ ಅಧಿಕಾರಕ್ಕೆ ಬಂದದ್ದು ಇತಿಹಾಸ.

ಶಾಂತಿಭೂಷಣ್ 1980ರಲ್ಲೇ ಬಿಜೆಪಿ ಸೇರಿದ್ದರು. ಪ್ರಕರಣವೊಂದರಲ್ಲಿ ವಕೀಲನಾಗಿ ತಾನು ನೀಡಿದ ಸಲಹೆಯನ್ನು ಬಿಜೆಪಿ ಮಾನ್ಯ ಮಾಡಲಿಲ್ಲ ಎಂದು ಪಕ್ಷದಿಂದ ಹೊರಬಂದರು. ವಕೀಲರಾಗಿ ವೃತ್ತಿಪರತೆಗೇ ಅವರ ನಿಷ್ಠೆ. ಹಾಗಾಗಿ ಅಪಾರ ವಿರೋಧಿಗಳನ್ನೂ ಸೃಷ್ಟಿಸಿಕೊಂಡಿದ್ದಾರೆ. 1993ರ ಮುಂಬೈ ಬಾಂಬ್ ಸ್ಫೋಟದ ಇಬ್ಬರು ಆರೋಪಿಗಳ ಪರ ವಕಾಲತ್ತು, ಸಂಸತ್ ದಾಳಿಯ ಆರೋಪಿ ಶೌಕತ್ ಹುಸೇನ್ ಗುರುವಿಗೆ 10 ವರ್ಷ ಜೈಲು ಶಿಕ್ಷೆ ಆದದ್ದನ್ನು ಪ್ರಶ್ನಿಸಿ ಅವನ ಪರ ವಾದ ಮಾಡಿದ್ದು, ಅರುಂಧತಿ ರಾಯ್ ವಿರುದ್ಧದ ಮಾನನಷ್ಟ ಮೊಕದಮೆಯಲ್ಲಿ ವಾದಿಸಿದ್ದು– ಮುಂತಾದ ಅವರ ವೃತ್ತಿಪರತೆಯನ್ನು ಇಷ್ಟ ಪಡದವರೂ ಇದ್ದಾರೆ. ಭವಿಷ್ಯನಿಧಿ ಹಗರಣದಲ್ಲಿದ್ದ ನ್ಯಾಯಾಧೀಶರ ವಿರುದ್ಧ ಅವರ ಕಾನೂನು ಹೋರಾಟವೂ ಉಲ್ಲೇಖನೀಯ. ಪ್ರಧಾನಿಯಾಗಿದ್ದ ದೇವೇಗೌಡರ ಪರವಾಗಿಯೂ ಶಾಂತಿಭೂಷಣ್ ವಾದಿಸಿದ್ದರು.

ಎಂಟು ಮಂದಿ ಮಾಜಿ ನ್ಯಾಯಾಧೀಶರು ಭ್ರಷ್ಟರು ಎಂದು ಹೇಳಿಕೆ ನೀಡಿ ನ್ಯಾಯಾಂಗ ನಿಂದನೆ ಮೊಕದ್ದಮೆ ಎದುರಿಸುತ್ತಿರುವ ಶಾಂತಿಭೂಷಣ್, ಮುಖ್ಯಮಂತ್ರಿ ಮಾಯಾವತಿಯವರ ವಿವೇಚನಾ ಕೋಟಾದಲ್ಲಿ ಜಮೀನು ಪಡೆದಿದ್ದಾರೆಂಬ ಆರೋಪವಿದೆ. ಭ್ರಷ್ಟಾಚಾರದ ವಿರುದ್ಧ ದೇಶವೇ ಮೈಕೊಡವಿ ಎದ್ದು ನಿಂತು ಲೋಕಪಾಲ ಮಸೂದೆ ತರಬೇಕೆನ್ನುವ ಹಂತದಲ್ಲಿ ಈ ಎಲ್ಲ ಆರೋಪಗಳು ಬಂದಿರುವುದು ಶಾಂತಿಭೂಷಣ್ ವಿರುದ್ಧ ಲಾಬಿ ಎಷ್ಟೊಂದು ಪ್ರಬಲವಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಹಾಗೆಯೇ ವಕೀಲರು ರಾಜಕಾರಣಿಗಳೂ ಆಗಿದ್ದರೆ ದೇಶ ಎಂತಹ ಸಂದಿಗ್ಧ ಅನುಭವಿಸಬೇಕು ಎನ್ನುವುದನ್ನೂ ಸೂಚಿಸುತ್ತದೆ.

## ಮಾಲಿಂಗನ ಮಂಡಿ

ಶ್ರೀಲಂಕಾದ ಅತಿವೇಗದ ಬೌಲರ್ ಲಸಿತ್ ಮಾಲಿಂಗರಿಗೆ ನಿಜಕ್ಕೂ ಮಂಡಿನೋವು ತೀವ್ರ ತೊಂದರೆ ಕೊಡುತ್ತಿದೆಯೆ? ಅವರ ಅನಾರೋಗ್ಯ ಕೇವಲ ನೆಪವೆ? ಕ್ರಿಕೆಟಿಗರಿಗೆ ಹಿಡಿದಿರುವ ಹಣದ ಹುಚ್ಚಿಗೆ ಮಾಲಿಂಗ ಪ್ರಕರಣ ಹೊಸ ಸಾಕ್ಷ್ಯವೆ?– ಹೀಗೊಂದು ಚರ್ಚೆ ಹುಟ್ಟಿಕೊಂಡಿದೆ. ಕಳೆದ ತಿಂಗಳು ಲಸಿತ್ ಮಾಲಿಂಗ ಲಂಕಾ ಕ್ರಿಕೆಟ್ ಮಂಡಳಿಗೆ ಪತ್ರವೊಂದನ್ನು ಬರೆದರು. 'ನನ್ನ ಮಂಡಿ ವಿಪರೀತ ನೋಯುತ್ತಿದೆ. ಹಾಗಾಗಿ ಇಂಗ್ಲೆಂಡ್ ಪ್ರವಾಸಕ್ಕೆ ನನ್ನನ್ನು ಆಯ್ಕೆ ಮಾಡಬೇಡಿ. ನನಗೆ ರೆಸ್ಟ್ ಬೇಕು' ಎನ್ನುವುದು ಪತ್ರದ ಸಾರಾಂಶ. ಮಂಡಳಿಯೂ ಒಪ್ಪಿತು.



ಆದರೆ ಮರು ವಾರದಲ್ಲಿ ಮಾಲಿಂಗ ಐಪಿಎಲ್‌ನಲ್ಲಿ ಪ್ರತ್ಯಕ್ಷ! ಮುಂಬೈ ಇಂಡಿಯನ್ಸ್ ತಂಡದ ಪರ ಸಖತ್ ಬೌಲಿಂಗ್! 'ಐಪಿಎಲ್ ಮುಗಿದ ತಕ್ಷಣ ದೇಶಕ್ಕೆ ವಾಪಸ್ ಬನ್ನಿ. ಪುನಶ್ಚೇತನ ಶಿಬಿರ ಸೇರಿಕೊಳ್ಳಿ' ಎಂದು ಲಂಕಾ ಮಂಡಳಿ ನೋಟಿಸ್ ಕಳಿಸಿದೆ. ಆದರೆ ಲಸಿತ್ ಮಾಲಿಂಗ ಟೆಸ್ಟ್ ಕ್ರಿಕೆಟ್‌ನಿಂದಲೇ ನಿವೃತ್ತಿ ಘೋಷಿಸಿದ್ದಾರೆ! '20-20 ಪಂದ್ಯದಲ್ಲಿ ಒಮ್ಮೆಗೆ ಎರಡು ಓವರ್ ಬೌಲಿಂಗ್ ಮಾಡಿದರೆ ಸಾಕು. ಅಷ್ಟಕ್ಕೆ ನನ್ನ ಮಂಡಿ ತೊಂದರೆ ಕೊಡುವುದಿಲ್ಲ. ಆದರೆ ಟೆಸ್ಟ್‌ನಲ್ಲಿ ಸುದೀರ್ಘವಾಗಿ ಬೌಲಿಂಗ್ ಮಾಡುವುದು ಕಷ್ಟ' ಎಂದಿದ್ದಾರೆ ಮಾಲಿಂಗ. ಅವರ ಮಾತಿನಲ್ಲಿ ಸತ್ಯ ಇರಬಹುದು; ಆದರೆ ಯಾರೂ ನಂಬುವ ಸ್ಥಿತಿಯಲ್ಲಿ ಇಲ್ಲ! ಕಾರಣ ಐಪಿಎಲ್ ಪಂದ್ಯಗಳಲ್ಲಿ ಹರಿದು ಬರುವ ಕೋಟ್ಯಂತರ ರೂಪಾಯಿ! ದೇಶಕ್ಕಾಗಿ ಆಡುವಾಗ ಮಾತ್ರ ಮಂಡಿ ನೋವು ಬರುತ್ತದೆಯೆ.. ಎನ್ನುವುದು ಪ್ರಶ್ನೆ.

ಮಾಲಿಂಗ (ಬರ್ತ್‌ಡೇ 28-8-83) ಟೆಸ್ಟ್ ಕ್ರಿಕೆಟ್ ಪ್ರವೇಶಿಸಿದ್ದು 2004ರಲ್ಲಿ. ಮೊದಲ ಟೆಸ್ಟ್‌ನಲ್ಲೇ 6 ವಿಕೆಟ್ ಕಬಳಿಸಿದ್ದರು! ಕೇವಲ 27ರ ಹರೆಯದಲ್ಲೇ ಟೆಸ್ಟ್ ನಿವೃತ್ತಿಯೆ?! ದ.ಆಫ್ರಿಕಾದ ವಿರುದ್ಧ ಅಂತರರಾಷ್ಟ್ರೀಯ ಪಂದ್ಯದಲ್ಲಿ ಸತತ ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್ ಕಬಳಿಸಿದ ಮಾಲಿಂಗರ ವಿಶ್ವದಾಖಲೆ ಅಜೇಯ. 140-150 ಕಿ.ಮೀ ವೇಗದಲ್ಲಿ ಮಾಲಿಂಗ ಸತತವಾಗಿ ಬೌಲಿಂಗ್ ಮಾಡುವುದನ್ನು ನೋಡುವುದೇ ಒಂದು ಸೊಗಸು. ಬೌಲಿಂಗ್‌ನಲ್ಲಿ ಅಡ್ಡಕ್ಕೆ ಕೈ ತಿರುಗಿಸುವ ಅವರ ಶೈಲಿಯನ್ನು ಮೆಚ್ಚದವರೂ ಸಾಧನೆಯನ್ನು ಮೆಚ್ಚುತ್ತಾರೆ. ಆದರೆ ಯಾರೂ ಅವರ ಮಂಡಿನೋವನ್ನು ನಂಬುತ್ತಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited. RNI No 7891/65